

## ಗ್ರೇ ಶೇಡ್‌ನಲ್ಲಿ ರಾಗಿಣಿ

**ನಟಿ** ರಾಗಿಣಿ ಇದೀಗ 'ಜಾವಾ' ಏರಲು ರೆಡಿಯಾಗಿದ್ದು, ಬೋಲ್ಡ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ನಟ ರಾಜವರ್ಧನ್ ಜೊತೆ ರಾಗಿಣಿ 'ಜಾವಾ' ಸಿನಿಮಾದಲ್ಲಿ ನಟಿಸುತ್ತಿದ್ದು, ಡೇರಿಂಗ್ ಲುಕ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ರಾಜವರ್ಧನ್ ಹಾಗೂ ರಾಗಿಣಿ ಒಟ್ಟಿಗೆ ನಟಿಸುತ್ತಿರುವ ಈ ಸಿನಿಮಾ ರಾಜವರ್ಧನ್ ಅವರ ನಿರ್ಮಾಣದ ಮೊದಲ ಸಿನಿಮಾ ಕೂಡ ಹೌದು. 'ರಾಗಿಣಿ ಈ ಸಿನಿಮಾದ ಹೃದಯವಾಗಿದ್ದು, ಒಂದು ವಿಶೇಷ ಪಾತ್ರಕ್ಕೆ ಬಣ್ಣ ಹಚ್ಚುತ್ತಿದ್ದಾರೆ. ಬೋಲ್ಡ್, ಸಂಕೀರ್ಣವಾದ ಮಹಿಳಾ ಪಾತ್ರವಾಗಿದ್ದು, ಸಿನಿಮಾದ ಪ್ರತಿ ಫ್ರೇಮ್‌ನಲ್ಲೂ ಇದರ ಪ್ರಾಮುಖ್ಯ ತಿಳಿಯಲಿದೆ' ಎಂದು ಚಿತ್ರತಂಡ ಹೇಳಿಕೊಂಡಿದೆ. 'ಜಾವಾ' ಸಿನಿಮಾ ಕನ್ನಡ, ತೆಲುಗು ಹಾಗೂ ತಮಿಳು ಭಾಷೆಯಲ್ಲಿ ಮೂಡಿಬರುತ್ತಿದೆ.

'ರಾಗಿಣಿ ಈ ಸಿನಿಮಾದಲ್ಲಿ ಬರೀ ನಟಿಸುತ್ತಿಲ್ಲ. ಇದರಲ್ಲಿ ರಾಣಿಯಾಗಿ ಆಳುತ್ತಾರೆ. ರಾಗಿಣಿಯನ್ನು ಈ ಹಿಂದೆ ನೋಡಿರದ ಪಾತ್ರದಲ್ಲಿ ನೋಡಬಹುದು. ಈ ಸಿನಿಮಾದಲ್ಲಿ ಅವರೇ ಸೂಪರ್ ಸ್ಟಾರ್. ಹಳೆಯ ಫಾರ್ಮುಲಾ ಮುರಿದ ಹೊಸ ಪ್ಯಾಟರ್ನ್ ಈ ಸಿನಿಮಾದ್ದು' ಎಂದು ರಾಜವರ್ಧನ್ ಬಣ್ಣಿಸಿದ್ದಾರೆ.

ಒಂಬತ್ತು ಮುಖ್ಯ ಪಾತ್ರಗಳಿರುವ ಈ ಸಿನಿಮಾ ದಕ್ಷಿಣ ಭಾರತದ ಹಲವು ಕಲಾವಿದರನ್ನು ಒಳಗೊಂಡಿದೆ. ■

# ಮಾರ್ನಮಿ ಮಿಂಚು



**ಕಾಲಿವುಡ್**‌ನಲ್ಲಿ ಎರಡು ಸಿನಿಮಾಗಳನ್ನು ಪೂರ್ಣಗೊಳಿಸಿರುವ ನಟಿ ಚೈತ್ರಾ ಜೆ. ಆಚಾರ್ ಇದೀಗ 'ಮಾರ್ನಮಿ' ಚಿತ್ರದ ಮೂಲಕ ಕನ್ನಡ ಪ್ರೇಕ್ಷಕರ ಮುಂದೆ ಮರಳಿದ್ದಾರೆ.

'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಬಳಿಕ ಕಾಲಿವುಡ್‌ಗೆ ಹೆಜ್ಜೆ ಇಟ್ಟಿದ್ದ ಚೈತ್ರಾ ಎರಡು ಸಿನಿಮಾಗಳಲ್ಲಿ ತೊಡಗಿಕೊಂಡಿದ್ದರು. ಅವುಗಳ ಚಿತ್ರೀಕರಣ ಪೂರ್ಣಗೊಂಡಿದ್ದು, ಮತ್ತೆ ಕನ್ನಡದತ್ತ ಹೆಜ್ಜೆ ಇಟ್ಟಿದ್ದಾರೆ. ಅವರ ನಟನೆಯ 'ಮಾರ್ನಮಿ' ಕನ್ನಡ ಚಿತ್ರ ಇದೇ ವರ್ಷ ತೆರೆಕಾಣಲಿದೆ.

ತಮ್ಮನ್ನು ಅರಸಿ ಬರುತ್ತಿರುವ ಭಿನ್ನ ಧಾಟಿಯ ಪಾತ್ರಗಳ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಅವರು, ಗ್ಲಾಮರಸ್ ಹೊರತಾಗಿ ಪರ್ಫಾರ್ಮೆನ್ಸ್‌ಗೆ ಅವಕಾಶವಿರುವ ಪಾತ್ರಗಳಿಗೆ ತಮ್ಮನ್ನು ಆಯ್ಕೆ ಮಾಡುತ್ತಿರುವ ಕುರಿತು ಖುಷಿ ಹಂಚಿಕೊಂಡಿದ್ದಾರೆ.

ಕರಾವಳಿ ಭಾಗದ ಪ್ರೇಮಕಥೆಯೊಂದನ್ನು ಅಲ್ಲಿನ ಸಂಸ್ಕೃತಿಯೊಂದಿಗೆ ತಂದಿರುವ ಚಿತ್ರ 'ಮಾರ್ನಮಿ' ಆಗಿದ್ದು, ಈ ಸಿನಿಮಾದಲ್ಲಿ ಚೈತ್ರಾ, ದೀಕ್ಷಾ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಮಂಗಳೂರಿನಲ್ಲಿ ದಸರಾ ಆಚರಣೆ ಸಂದರ್ಭ ನಡೆಯುವ ಕಥೆ ಇದಾಗಿದ್ದು, ಈ ಕಾರಣಕ್ಕೆ ಸಿನಿಮಾಗೂ 'ಮಾರ್ನಮಿ' ಎಂದೇ ಹೆಸರಿಡಲಾಗಿದೆ. ರೊಮ್ಯಾನ್ಸ್, ಡ್ರಾಮಾ ಹಾಗೂ ಸಂಸ್ಕೃತಿಯ ಮಿಶ್ರಣ ಎನ್ನಲಾಗಿದೆ.

'ಗ್ಯಾಂಗ್‌ಸ್ಟರ್ ಕಥೆಯೊಂದಿಗೆ ಪ್ರೇಮಕಥೆಯೂ ಇದರಲ್ಲಿದೆ. ಪಾತ್ರ ಸುಂದರ, ಸಂಕೀರ್ಣವಾಗಿಯೂ ಇದೆ' ಎಂದು ಚೈತ್ರಾ ಹೇಳಿದ್ದಾರೆ.

'ಈ ಕಥೆ ಕೇಳಿದಾಗ, ಕಥೆಯ ನಿರೂಪಣೆ ಹಾಗೂ ನನ್ನ ಪಾತ್ರವನ್ನು ಬಹಳ ಕೌತುಕವಾಗಿ ಕಟ್ಟಿರುವುದು ತಿಳಿಯಿತು. ನನಗೆ ಕಥೆ ಮುಖ್ಯ. ಐದೇ ನಿಮಿಷ ಸ್ಕ್ರೀನ್ ಮೇಲೆ ಇದ್ದರೂ ನನ್ನ ಕೊಡುಗೆ ಅರ್ಥಪೂರ್ಣವಾಗಿರಬೇಕು ಎಂದು ಬಯಸುತ್ತೇನೆ. ಇದು ಸಾಧ್ಯವಾಗದಿದ್ದರೆ ನಾನು ಆ ಪಾತ್ರವನ್ನು ಮಾಡುವುದಿಲ್ಲ' ಎಂದಿದ್ದಾರೆ.

ತಮ್ಮನ್ನು ಟೈಪ್‌ಕಾಸ್ಟ್ ಮಾಡದಿರುವ ಕುರಿತು ಸಮಾಧಾನ ಹೊಂದಿರುವ ಅವರಿಗೆ ಕನ್ನಡದಲ್ಲಿ ಮತ್ತಷ್ಟು ಉತ್ತಮ ಕಥೆಗಳು ಬರಬೇಕೆಂಬ ನಿರೀಕ್ಷೆಯಿದೆ. 'ಕನಸು, ಮಹತ್ವಾಕಾಂಕ್ಷೆ ಇರುವ ಹಲವು ಕನ್ನಡದ ಬರಹಗಾರರಿದ್ದಾರೆ. ಆದರೆ ಕೆಲವರು ಆರ್ಥಿಕ ಬೆಂಬಲವಿಲ್ಲದ ಕಾರಣ ಹಿಂದುಳಿಯುತ್ತಿದ್ದಾರೆ. ಇಂಥ ಬರಹಗಾರರಿಗೆ ಬೆಂಬಲ ಬೇಕಿದೆ' ಎಂದು ಹೇಳಿದ್ದಾರೆ.

ದಸರಾ ಸಮಯದಲ್ಲಿಯೇ 'ಮಾರ್ನಮಿ' ಸಿನಿಮಾ ಬಿಡುಗಡೆಗೆ ಯೋಜಿಸಲಾಗಿದೆ. ಸದ್ಯ 'ಉತ್ತರಕಾಂಡ' ಸಿನಿಮಾದಲ್ಲಿಯೂ ಚೈತ್ರಾ ನಟಿಸುತ್ತಿದ್ದು, 'ಟೋಬಿ', 'ಸಪ್ತಸಾಗರದಾಚೆ ಎಲ್ಲೋ' ಬಿಡುಗಡೆ ಬಳಿಕ ಮಲಯಾಳ, ತೆಲುಗು ಹಾಗೂ ಹಿಂದಿಯಿಂದಲೂ ಚೈತ್ರಾ ಅವರಿಗೆ ಅವಕಾಶಗಳು ಹುಡುಕಿಕೊಂಡು ಬರುತ್ತಿವೆ. ■